# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/10345/2019/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು
ದಿನಾಂಕ: 02.12.2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ರೇವಪ್ಪ ಮಲಕಪ್ಪ ಪಾಟೀಲ್ (ಮಾಜಿ ಸೈನಿಕ) ಶಿಕ್ಷಕರು ಸರ್ಕಾರಿ ಕಿರಿಯಪ್ರಾಥಮಿಕ ಶಾಲೆ, ನಾಯಕ ವಸ್ತಿ, ಅರಕೇರಿ ವಿಜಯಪುರ ಇವರ ವೇತನವನ್ನು ಸರಿಯಾಗಿ ನಿಗದಿ ಪಡಿಸದೇ, ಕರ್ತವ್ಯಲೋಪವೆಸಗಿದವರ ಮೇಲೆ ಕ್ರಮ ಕೈಗೊಳ್ಳುವ ಕುರಿತು.

*****

1) ದೂರುದಾರರಾದ ಶ್ರೀ ರೇವಪ್ಪ ಮಲಕಪ್ಪ ಪಾಟೀಲ, ಸಹ ಶಿಕ್ಷಕರು (ಮಾಜಿ ಸೈನಿಕರು), ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ನಾಯಕ ವಸ್ತಿ ಅರಕೇರಿ (ಗ್ರಾಮೀಣ ವಲಯ) ವಿಜಯಪುರ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರಾದ (1) ಶ್ರೀ ಮಹದೇವ ಗುರ್ರಪ್ಪ ಬೆಳ್ಳಣ್ಣನವರ್, ಪ್ರಸ್ತುತ ಶಿಕ್ಷಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ (ದಕ್ಷಿಣ), ಹಿಂದಿನ ಬಿ.ಇ.ಓ. (ಗ್ರಾಮೀಣ ವಲಯ) ವಿಜಯಪುರ, (2) ಶ್ರೀ ಯು.ಬಿ. ಸಿದರೆಡ್ಡಿ, ಪ್ರಥಮ ದರ್ಜೆ ಸಹಾಯಕ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ನಗರ ವಲಯ, ವಿಜಯಪುರು (3) ಶ್ರೀ ಆರ್.ಎನ್. ಹುರುಳಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗ್ರಾಮೀಣ ವಲಯ ವಿಜಯಪುರು ಜಿಲ್ಲೆ (ಇನ್ನು ಮುಂದೆ 1 ರಿಂದ 3 ನೇ ಎದುರುದಾರರು ಎಂದುಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2) ದೂರಿನ ಸಾರಾಂಶ:-

ಈ ಮೊದಲು ಪಿರ್ಯಾದುದಾರರು ಮಿಲಿಟರಿ ಸೇವೆ ಸಲ್ಲಿಸಿ ದಿನಾಂಕ: 29/01/2007 ರಂದು ಶಿಕ್ಷಣ ಇಲಾಖೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕನಾಗಿ ನೇಮಕಗೊಂಡಿರುತ್ತಾರೆ. ಮಿಲಿಟರಿ ಸೇವೆಯಲ್ಲಿ ಪಡೆಯುತ್ತಿದ್ದ ಕೊನೆಯ ಮೂಲ ವೇತನವನ್ನು ಇಲಾಖೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಪರಿಷ್ಕರಿಸಿ ನಿಗದಿಪಡಿಸಿದ್ದಾರೆ.

ಪಿರ್ಯಾದುದಾರರು ನಿಗದಿಪಡಿಸಿದ ವೇತನವನ್ನು ಏಪ್ರಿಲ್ 2014 ರಿಂದ ಪಡೆಯುತ್ತಿರುತ್ತಾರೆ. ಪಿರ್ಯಾದುದಾರರಿಗೆ ಬರಬೇಕಾದ ವೇತನ ವ್ಯತ್ಯಾಸದ ಮೊತ್ತವನ್ನು ಜನವರಿ 2007 ರಿಂದ ಮಾರ್ಚ್ 2014 ರವರೆಗೆ ಬರಬೇಕಿದ್ದ ಮೊತ್ತ ಒಟ್ಟು ರೂ. 6,54,353/- ಇದ್ದು ರೂ. 1,69,299 ಹಣವನ್ನು ಪಿರ್ಯಾದುದಾರರಿಗೆ ಸಂದಾಯ ಮಾಡಿರುತ್ತಾರೆ. ಪಿರ್ಯಾದುದಾರರ ಸೇವಾ ಪುಸ್ತಕದಲ್ಲಿ ದಿನಾಂಕ: 25/06/2015 ರಂದು ರೂಪಾಯಿ 6,54,353/- ಬಿಲ್ಲು ಮಾಡಿ ಟೋಕನ್ ನಂಬರ್ 2051292 ಈ ಟೋಕನಿಗೆ ಸಂದಾಯ ಮಾಡಲಾಗಿದೆ ಎಂದು ಬರೆದು 1ನೇ ಎದುರುದಾರರು ಮಾಡಿದ್ದಾರೆ. ಆದರೆ ಇಲ್ಲಿಯವರೆಗೆ ಪಿರ್ಯಾದುದಾರರ ಖಾತೆಗೆ ಯಾವುದೇ ಹಣ ಸಂದಾಯವಾಗಿರುವುದಿಲ್ಲ. 2 ವರ್ಷಗಳಿಂದ ಮನವಿ ಸಲ್ಲಿಸುತ್ತಿದ್ದು ಯಾವುದೇ ಪ್ರಯೋಜನ ಆಗಿರುವುದಿಲ್ಲ. ಆಗ 2ನೇ ಎದುರುದಾರರು ಲಂಚದ ರೂಪದಲ್ಲಿ 1,00,000/- ಹಣವನ್ನು ಕೇಳಿರುತ್ತಾರೆ. ಪಿರ್ಯಾದುದಾರರು ನಿರಾಕರಿಸಿದ ಕಾರಣ ಹಣ ಜಮೆಯಾಗಿರುವುದಿಲ್ಲ. ಪಿರ್ಯಾದುದಾರರ ಸೇವಾ ಪುಸ್ತಕದಲ್ಲಿ ಮಿಲಿಟರಿ ಸೇವೆ ಪುರವಣಿ ಬಿಲ್ಲು 6,54,353/- ರೂ. ಟೋಕನ್ ನಂಬರ್

2051292 ದಿನಾಂಕ: 25/06/2015 ರಂದು ಸಂದಾಯ ಮಾಡಲಾಗಿದೆ ಎಂದು ತಪ್ಪಾಗಿ ನಮೂದಿಸಿದ್ದಾರೆ.

ಈ ಕುರಿತು ಉಪನಿರ್ದೇಶಕರಿಗೆ ಮನವಿ ಸಲ್ಲಿಸಲಾಗಿದ್ದು ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ನ್ಯಾಯ ಒದಗಿಸಲು ವಿನಂತಿಸಿ ದೂರು ಸಲ್ಲಿಸಿರುತ್ತಾರೆ.

3) ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ. ಪಿರ್ಯಾದುದಾರರಿಗೆ ಜನವರಿ 2007 ರಿಂದ ಮಾರ್ಚ್ 2014 ರ ವರೆಗೆ ಬರಬೇಕಿರುವ ಬಾಕಿ ವೇತನವು ಒಟ್ಟು 6,54,353/- ರೂ ಗಳದ್ದು ರೂ. 1,69,299 ರೂ. ಗಳ ಬಿಲ್ ನಂತೆ 1,69,299 ರೂ ಮಾತ್ರ ಪಿರ್ಯಾದುದಾರರ ಬ್ಯಾಂಕ್ ಖಾತೆಗೆ ಜಮೆಯಾಗಿರುತ್ತದೆ.

4) ಆದರೆ ಪಿರ್ಯಾದುದಾರರ ಸೇವಾ ಪುಸ್ತಕದಲ್ಲಿ 6,54,353/- ರೂ. ಗಳು ಜಮೆಯಾಗಿರುವುದಾಗಿ ತಪ್ಪಾಗಿ ನಮೂದಿಸಿರುತ್ತಾರೆ ಎಂದು ಆರೋಪಿಸಿರುತ್ತಾರೆ. ಟೋಕನ್ ನಂಬರ್ 2051292 ರ ಪ್ರತಿ ಸಲ್ಲಿಸಿದ್ದು ಸದರಿ ಟೋಕನ್ ದಿನಾಂಕ: 25/03/2014 ಎಂದಿರುತ್ತದೆ.

5) ಪಿರ್ಯಾದುದಾರರ ಸೇವಾ ಪುಸ್ತಕದ ಪ್ರತಿ ಸಲ್ಲಿಸಿದ್ದು ಸದರಿ ಸೇವಾ ಪುಸ್ತಕದಲ್ಲಿ ಟೋಕನ್ ನಂಬರ್ 2051292 ದಿನಾಂಕ: 25/06/2015 ರಂದು ಸಂದಾಯ ಮಾಡಲಾಗಿದೆ ಎಂದು ತಪ್ಪಾಗಿ ನಮೂದಿಸಿ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಪಿರ್ಯಾದುದಾರರ ಸೇವಾ ಪುಸ್ತಕದ ನಮೂದುಗಳನ್ನು ನಿರ್ಲಕ್ಷ್ಯವಾಗಿ ದಾಖಲಿಸಿ

ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುತ್ತದೆ. ಕಾರಣ ದೂರಿನ ಆರೋಪಗಳ ಬಗ್ಗೆ ತನಿಖೆಗೆ ಆದೇಶಿಸಬಹುದಾಗಿದೆ.

6) 1ನೇ ಎದುರುದಾರರ ಆಕ್ಷೇಪಣೆಗಳು:-

ಕ್ಷೇತ್ರ ಶಿಕ್ಷಣಾಧಿಕಾರಿಗಳೆಂದು ಗ್ರಾಮೀಣ ವಲಯ ವಿಜಯಪುರ ಇಲ್ಲಿ ದಿನಾಂಕ: 04/03/2014 ರಿಂದ 01/09/2017 ರವರೆಗೆ ಸೇವೆ ಸಲ್ಲಿಸಿರುವೆನು. ಪಿರ್ಯಾದುದಾರರು ಸಹ ಶಿಕ್ಷಕರೆಂದು ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ (ಎಸ್.ಎಸ್.ಎ) ವೇತನ ಪಡೆಯುತ್ತಿದ್ದರು. ಪಿರ್ಯಾದುದಾರರು ದಿನಾಂಕ: 31/03/2005 ರಂದು ಮಿಲಿಟರಿ ಸೇವೆಯಿಂದ ನಿವೃತ್ತಿಯಾಗಿ ಸರ್ಕಾರಿ ಆದೇಶದಂತೆ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ (ಎಸ್.ಎಸ್.ಎ) ಸೇವೆ ಸಲ್ಲಿಸುತ್ತಿದ್ದರು. ದಿನಾಂಕ: 31/03/2005 ರಂದು ಮಿಲಿಟರಿ ಸೇವೆಯಿಂದ ನಿವೃತ್ತಿ ಹೊಂದಿದ್ದು ನಿವೃತ್ತಿ ಸಮಯದಲ್ಲಿ ಕೊನೆಯ ವೇತನ ಪಡೆಯುತ್ತಿರುವ ಮೂಲ ವೇತನ ವಿವರಗಳನ್ನು ಸಲ್ಲಿಸಿರುತ್ತಾರೆ. ಅಸಿಸ್ಟೆಂಟ್ ರಿಕಾರ್ಡ್ ಆಫಿಸರ್ ಮದ್ರಾಸ್ ಇಂಜಿನಿಯರ್ ಗ್ರೂಪ್ ಇವರು ನೀಡಿದ ವೇತನ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಕ್ಷೇತ್ರ ಶಿಕ್ಷಣಾಧಿಕಾರಿಗಳು ದಿನಾಂಕ: 21/12/2013 ರಂದು ಕೆ.ಸಿ.ಎಸ್.ಆರ್. ನಿಯಮ 41ಸಿ(2) ರ ಪ್ರಕಾರ ಪಿರ್ಯಾದುದಾರರಿಗೆ ಮೂಲ ವೇತನ ರೂ. 10,800/- ದಿನಾಂಕ: 29/01/2007 ರಿಂದ ಜಾರಿಗೆ ಬರುವಂತೆ ಆಗಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ವೇತನ ನಿಗದಿ ಪಡಿಸಿರುತ್ತಾರೆ.

7) ಸಿಬ್ಬಂಧಿಯವರು ಸದರಿ ಶಿಕ್ಷಕರಿಗೆ ಸಂಬಂಧಿಸಿದಂತೆ ದಿನಾಂಕ: 29/01/2007 ರಿಂದ ಮಾರ್ಚ್ 2014 ರವರೆಗೆ ಬರಬೇಕಾದ ಒಟ್ಟು ಪುರವಣಿ ಬಿಲ್ಲಿನ ಒಟ್ಟು ಮೊತ್ತ 6,54,353/- ಬಿಲ್ಲು ತಯಾರಿಸಿ ಟೋಕನ್ ನಂ-2051292 ದಿನಾಂಕ:

25/03/2014 ರಂದು ನನ್ನ ರುಜುವಿಗಾಗಿ ಸಾದರಪಡಿಸಿರುತ್ತಾರೆ.ಯಾವ ರೀತಿ ವೇತನ ನಿಗದಿಪಡಿಸಿದ್ದಾರೆಂದು ಸ್ಪಷ್ಟವಾಗದೆ ಬಾಕಿ ಪುರವಣಿ ಬಿಲ್ಲು ರೂ. 6,54,353/- ಬಿಲ್ಲಿಗೆ ಮತ್ತು ಟೀಕರ್ನ್‌ಗೆ ರುಜು ಮಾಡದೆ ಬಿಲ್ಲನ್ನು ಪರಿಶೀಲನೆಗಾಗಿ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ವಿಜಯಪುರ ಇವರಿಗೆ ದಿನಾಂಕ: 25/03/2015 ರಂದು ಬಿಲ್ಲು ಪರಿಶೀಲಿಸಿ ಮಾರ್ಗದರ್ಶನಕ್ಕಾಗಿ ಸಲ್ಲಿಸಲಾಗಿತ್ತು. ಬಾಕಿ ಪುರವಣಿ ಬಿಲ್ಲನ್ನು ಪ್ರಿ-ಆಡಿಟ್‌ಗಾಗಿ ಸಲ್ಲಿಸಿದ್ದು, ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್ ವಿಜಯಪುರ ಇವರು ಸರ್ಕಾರಿ ಆದೇಶ ದಿನಾಂಕ: 30/04/2010 ಜನರಲ್ ಡೆಲಿಗೇಶನ್ ಆಫ್ ಪವರ್ಸ್ ರಂತೆ ಪರಿಶೀಲಿಸಿ ಕ್ರಮ ಕೈಗೊಳ್ಳಬಹುದಾಗಿದೆಯೆಂದು ತಮ್ಮ ಪತ್ರದಲ್ಲಿ ಮಾರ್ಗದರ್ಶನ ನೀಡಿರುತ್ತಾರೆ.

8) ದಿನಾಂಕ: 28/01/2013 ರಿಂದ ಅನ್ವಯಿಸುವಂತೆ ಬಾಕಿ ಪುರವಣಿ ಬಿಲ್ಲು ಟೋಕನ್ ನಂ. 0496515 ದಿನಾಮಕ: 16/06/2015 ರನ್ವಯ ಬಿಲ್ಲು ತಯಾರಿಸಿದ್ದು, ಬಿಲ್ಲಿನ ಒಟ್ಟು ಮೊತ್ತ: 186709/- ಕಟಾವಣಿ: 17410/-, ನಿವ್ವಳ: 1,69,299/- ಮೊತ್ತವನ್ನು ಪಿರ್ಯಾದುದಾರರು ಪಡೆದಿರುತ್ತಾರೆ. ಆದರೆ ಸದರಿ ಶಿಕ್ಷಕರ ಸೇವಾ ಪುಸ್ತಕ ಪುಟದಲ್ಲಿ ಸದರಿ ಶಿಕ್ಷಕರಿಗೆ ಸಂದಾಯವಾದ ರೂ. 1,86,709/- ಎಂದು ನಮೂದು ಆಗಬೇಕಾಗಿದ್ದು ನಜರ ಚೂಕಿನಿಂದ ಸದರಿಯವರ ಸೇವಾ ಪುಸ್ತಕದಲ್ಲಿ ರೂ. 6,54,353/- ಎಂದು ತಪ್ಪಾಗಿ ನಮೂದಾಗಿರುತ್ತದೆ. ಈಗಿನ ಸಿಬ್ಬಂದಿ ಹಾಗೂ ಅಧಿಕಾರಿಗಳು ನಿರ್ಲಕ್ಷ ತೋರಿಸಿ ಇಲ್ಲಿಯವರೆಗೂ ಪಿರ್ಯಾದುದಾರರ ಸೇವಾ ಪುಸ್ತಕ ನನಗೆ ಕಳಿಸಿರುವುದಿಲ್ಲ. ಹೀಗಾಗಿ ಸೇವಾ ಪುಸ್ತಕದಲ್ಲಿ ರೂ. 6,54,353/- ಎಂದು ನಮೂದಿಸಿದ್ದು ಸರಿಪಡಿಸದೆ ಹಾಗೆ ಉಳಿದುಕೊಂಡು ಬಂದಿರುತ್ತದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ವಿಜಯಪುರ ಗ್ರಾಮೀಣ ವಲಯ ರವರ ಪತ್ರ ದ್ವಿ.ದ.ಸ. ವಿಭಾಗ-8 ಇವರಿಗೆ ಸೇವಾ ಪುಸ್ತಕದಲ್ಲಿ

6,54,353/- ಹಣವನ್ನು ತಪ್ಪಾಗಿ ನಮೂದಿಸಿದ್ದನ್ನು ರದ್ದು ಪಡಿಸಿ ರೂ. 1,86,709/- ಇದನ್ನು ಸೇವಾ ಪುಸ್ತಕದಲ್ಲಿ ನಮೂದಿಸಲು ತಿಳಿಸಿದ್ದೂ ಸಹ ಬೇಜವಾಬ್ದಾರಿಯಿಂದ ನಿರ್ಲಕ್ಷತನ ತೋರಿಸಿ ಸೇವಾ ಪುಸ್ತಕದಲ್ಲಿ ಈಗಾಗಲೇ ತೋರಿಸಿದ ರೂ. 6,54,353/- ಹಾಗೇ ಉಳಿದುಕೊಂಡು ಬಂದಿರುತ್ತಾರೆ.

9) ಪಿರ್ಯಾದುದಾರರು ಇಲ್ಲಸಲ್ಲದ ಆರೋಪಗಳನ್ನು ಮಾಡಿ ಸರಕಾರದ ಹಣವನ್ನು ಮೋಸತನದಿಂದ ಪಡೆಯಲು ದುರಾಲೋಚನೆ ಮಾಡುತ್ತಿದ್ದು ಬೇಜವಾಬ್ದಾರಿಯಿಂದ ಮತ್ತು ದುರ್ನಡತೆಯಿಂದ ನಡೆದುಕೊಳ್ಳುವುದು ಕಂಡು ಬರುತ್ತದೆ.

10) ಪಿರ್ಯಾದುದಾರರಿಗೆ ಕೆ.ಸಿ.ಎಸ್.ಆರ್. ನಿಯಮ 41 ಸಿ (2) ರ ಪ್ರಕಾರ ವೇತನ ನಿಗದಿಗೊಳಿಸಿದ್ದು ತಪ್ಪಾಗಿದೆ ಎಂದು ಸಿಬ್ಬಂಧಿಗಳು ತಿಳಿಸಿರುತ್ತಾರೆ. ಕೆ.ಸಿ.ಎಸ್.ಆರ್. ನಿಯಮ 41 ಸಿ (3) ರ ಪ್ರಕಾರ ಮಿಲಟರಿ ಸೇವೆಯಲ್ಲಿ ಕೊನೆಯ ಸಲ ಪಡೆದುಕೊಂಡ ವೇತನವು ಆತನು ನೇಮಕಗೊಂಡ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನಕ್ಕಿಂತ ಕಡಿಮೆ ಇರುವಲ್ಲಿ ಅದನ್ನು ಕನಿಷ್ಠ ವೇತನಕ್ಕೆ ನಿಗದಿ ಪಡಿಸತಕ್ಕದ್ದು ಎಂದು ನಿಯಮವಿರುತ್ತದೆ.

11) ಮಿಲಟರಿ ಸೇವೆಯಿಂದ ನಿವೃತ್ತಿಯಾಗುವ ಸಂದರ್ಭದಲ್ಲಿ ಪಡೆಯುತ್ತಿದ್ದ ಒಟ್ಟು ಮೊತ್ತ 5,659/- ಇದ್ದು ಸಹ ಶಿಕ್ಷಕರೆಂದು ನೇಮಕಾತಿ ಹೊಂದಿದ ಕನಿಷ್ಠ ಮೂಲ ವೇತನ 6,250/- ಹೆಚ್ಚಿಗೆ ಇದ್ದು ಹಿಂದಿನ ಅಧಿಕಾರಿಗಳು ಹಾಗೂ ಸಿಬ್ಬಂದಿ ಸೇರಿಕೊಂಡು ಪಿರ್ಯಾದುದಾರರಿಗೆ ನಿಯಮಬಾಹಿರವಾಗಿ ವೇತನ ನಿಗದಿ ಪಡಿಸಿರುತ್ತಾರೆ. ಹಿಂದಿನ ಅಧಿಕಾರಿಗಳು ತಪ್ಪು ಮೊತ್ತ ನಿಗಧಿ ಮಾಡಿದ್ದು ಸಮಸ್ಯೆಯಾಗಿ ಪರಿಣಮಿಸಿದೆ ಎಂದು ನಮೂದಿಸಿರುತ್ತಾರೆ.

12) <u>2ನೇ ಎದುರುದಾರರ ಆಕ್ಷೇಪಣೆಗಳು:-</u>

ದ್ವಿ.ದ.ಸ. ಹುದ್ದೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಗ್ರಾಮೀಣ ವಲಯ ವಿಜಯಪುರ ಈ ಕಛೇರಿಯಲ್ಲಿ ದಿನಾಂಕ: 28/05/2011 ರಿಂದ 05/01/2017 ರವರೆಗೆ ಸೇವೆ ಸಲ್ಲಿಸುತ್ತಾ ಕಾರ್ಯ ಹಂಚಿಕೆ ಪ್ರಕಾರ ಆದೇಶವಾಗಿದೆ. ಪಿರ್ಯಾದುದಾರರ ಸೇವಾ ಪುಸ್ತಕ ಹಾಗೂ ವೇತನ ಬಿಲ್ಲುಗಳ ಬಗ್ಗೆ ನನಗೆ ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ ಎಂದು ನಮೂದಿಸಿರುತ್ತಾರೆ.

13) <u>3ನೇ ಎದುರುದಾರರ ಆಕ್ಷೇಪಣೆಗಳು:-</u>

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ವಿಜಯಪುರ ರವರ ಆದೇಶ ದಿನಾಂಕ: 27/01/2007 ರ ಪ್ರಕಾರ ಜಿಲ್ಲೆಯಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕ ಹುದ್ದೆಯ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಿರ್ಯಾದುದಾರರು ಆಯ್ಕೆಗೊಂಡು ಕೆ.ಬಿ.ಎಲ್.ಪಿ.ಎಸ್. ಗೋಳ್ಳಗಿ ವಸ್ತಿ ತಡವಲಗಾ ಶಾಲೆಗೆ ಮೂಲ ವೇತನ 3,300 ವೇತನ ಶ್ರೇಣಿ 3,300-6,300 ರಂತೆ ದಿನಾಂಕ: 29/01/2007 ಪೂರ್ವಾಹ್ನ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

14) ಮೂಲ ಸೇವಾ ಪುಸ್ತಕದಲ್ಲಿ ನಮೂದಿಸಿದ ಪ್ರಕಾರ ಇವರು ಮಾಜಿ ಸೈನಿಕರಾಗಿ ನಿವೃತ್ತರಾದ ಸಮಯದಲ್ಲಿ ಪಡೆಯುತ್ತಿದ್ದ ಮೂಲ ವೇತನ ಹಾಗೂ ಸಹ ಶಿಕ್ಷಕರಾಗಿ ನೇಮಕಾತಿಯಾದ ನಂತರ ಪಡೆಯುತ್ತಿದ್ದ ಮೂಲ ವೇತನ ವ್ಯತ್ಯಾಸವಾಗುವ ಕಾರಣ ಸರಕಾರದ ಆದೇಶದ ಸಂಖ್ಯೆ ಕರ್ನಾಟಕ ನಾಗರೀಕಾ ಸೇವಾ ನಿಯನಮಾವಳಿ ನಿಯಮ 41/ಸಿ ರ ಅನ್ವಯ ದಿನಾಂಕ: 29/01/2007 ರಿಂದ 01/08/2014 ರ ವರೆಗೆ ವೇತನವನ್ನು ಮರು ನಿಗದಿ ಪಡಿಸಿ ಪರಿಷ್ಕರಿಸಿ ವೇತನ ನಿಗದಿ ಮಾಡಿ ಸದರಿಯವರ ಮೂಲ ಸೇವಾ ಪುಸ್ತಕದ ಪುಟ ಸಂಖ್ಯೆ-15 ರಲ್ಲಿ ನಮೂದಿಸಿರುತ್ತಾರೆ.

ಸದರಿ ವೇತನ ನಿಗದಿ ತಖ್ತೆಗೆ ಆಗಿನ ಅವಧಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಮ್.ವಯ್. ಹೊನ್ನ ಕಸ್ತೂರಿ ರವರ ರುಜು ಇರುತ್ತದೆ. ಹಾಗೂ ತದನಂತರ ರೂ. 6,54,353/- ರ ವ್ಯತ್ಯಾಸ ಬಿಲ್ಲಿಗೆ ಈ ಅವಧಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ 1ನೇ ಎದುರುದಾರರ ರುಜು ಇರುತ್ತದೆ ಹಾಗೂ ತದನಂತರ ಮೂಲ ಸೇವಾ ಪುಸ್ತಕದಲ್ಲಿ ನಮೂದಿಸಿ ಸಂಬಂಧಿಸಿದ ಶಿಕ್ಷಕರಿಗೆ ವ್ಯತ್ಯಾಸದ ಬಿಲ್ಲಿನ ಮೊತ್ತವನ್ನು ಸಂದಾಯ ಮಾಡಲಾಗಿದೆಯೆಂದು ಟೋಕನ್ ನಂ. 2051292 ರ ಪ್ರಕಾರ ದಿನಾಂಕ: 25/06/2015 ರಂದು ಸೇವಾ ಪುಸ್ತಕದಲ್ಲಿ ನಮೂದಿಸಲಾಗಿರುತ್ತದೆ.

15) ಸದರಿ ಅವಧಿಯಲ್ಲಿ ವಿಷಯ ನಿರ್ವಾಹಕರಾಗಿ ಕಾರ್ಯ ನಿರ್ವಹಿಸಿದ 1. ಶ್ರೀ ಯು.ಬಿ. ಸಿದ್ದರೆಡ್ಡಿ, 2. ಶ್ರೀ ನಾಗರಾಜ ಬರಗೂಡಿ (ನಿಯೋಜಿತ ಕಾರ್ಯನಿರ್ವಾಹಕರು) ಹಾಗೂ 3. ಶ್ರೀ ರಾಘವೇಂದ್ರ ಪೂರೋಹಿತ ಇವರಿಗೆ ಸದರಿ ಪ್ರಕರಣದ ಕುರಿತು ಯಾವುದೇ ಮಾಹಿತಿ ನೀಡುವ ಕುರಿತು, ಸದರಿ ಸಿಬ್ಬಂದಿಗಳಿಗೆ ಜ್ಞಾಪನ ನೀಡಲಾಗಿರುತ್ತದೆ ಎಂದು ನಮೂದಿಸಿರುತ್ತಾರೆ.

16) ಎದುರುದಾರರು ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ KCSR 41 ಸಿ (3) ರ ಪ್ರಕಾರ ಪಿರ್ಯಾದುದಾರರಿಗೆ ವೇತನವನ್ನು ನಿಗಧಿಪಡಿಸದೆ ನಿಯಬಾಹಿರವಾಗಿ ವೇತನ ನಿಗಧಿಪಡಿಸಿ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

17) ನಿರ್ದೇಶಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ಪತ್ರ ಸ್ವೀಕರಿಸಿದ್ದು ಸದರಿ ಪತ್ರದಲ್ಲಿ ಶ್ರೀಮತಿ ಸಾಯಿಕ ಬಾನುಖಾನ, ಪ್ರವಾಚಕರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (ಸಿ.ಟಿ.ಇ), ಜಮಖಂಡಿ, ವಿಜಯಪುರ ಜಿಲ್ಲೆ ಇವರಿಗೆ ತನಿಖೆ ಮಾಡಿ ವರದಿ ಸಲ್ಲಿಸಲು

ಸೂಚಿಸಿರುವುದಾಗಿ ತಿಳಿಸಿರುತ್ತಾರೆ. ಹಾಗೂ ತನಿಖಾವರದಿ ಯನ್ನು ಅಪಾರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಸಲ್ಲಿಸಿರುವುದು ಕಂಡುಬರುತ್ತದೆ.

18) ಅಪಾರ ಆಯುಕ್ತರು ಸಾರ್ವನಿಕ ಶಿಕ್ಷಣ ಇಲಾಖೆ ಧಾರವಾಡ ರವರ ದಿ: 07-09-2020 ದೂರಿಗೆ ಸಂಬಂಧಪಟ್ಟಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯೊಂದಿಗೆ ಶ್ರೀಮತಿ ಸಾಯಿರಾಬಾನು ಪ್ರವಾಚಕರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಜಮಖಂಡಿ ಇವರು ದಿ: 28-02-2020 ರಂದು ಹಾಗೂ 27-07-2020 ರಂದು ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ವಯ ಅಪಾರ ಆಯುಕ್ತರು ಈ ಕೆಳಗಿನಂತೆ ಷರಾಗಲೋಂದಿಗೆ ಸಲ್ಲಿಸಿರುತ್ತಾರೆ.

19) ಅಪಾರ ಆಯುಕ್ತರು ತಮ್ಮ ವರದಿಯಲ್ಲಿ ವಿಚಾರಣಾ ವರದಿಯನ್ನು ಪರಿಶೀಲಿಸಿ ಈ ಕೆಳಗಿನಂತೆ ನಮೂದಿಸಿ ಸಲ್ಲಿಸಿರುತ್ತಾರೆ.

ಎ. ರೇವಪ್ಪ ಮದಕಪ್ಪ ಪಾಟೀಲ್ ಇವರು ಮಿಲಿಟರಿ ಸೇವೆಯಿಂದ ದಿ: 31-03-2005 ರಂದು ಬಿಡುಗಡಿ ಹೊಂದಿರುತ್ತಾರೆ.

ಬಿ. ಪ್ರಾಥಮಿಕ ಶಾಲಾ ಶಿಕ್ಷಕರಾಗಿ ದಿ: 29-01-2007 ರಂದು ನೇಮಕಾತಿ ಹೊಂದಿರುತ್ತಾರೆ.

ಸಿ. ಏಪ್ರಿಲ್ 2014 ರಿಂದ ವೇತನ ನಿಗದಿಗೊಳಿಸಿ ವೇತನ ಆಕರಣೆ ಮಾಡಲಾಗಿದೆ.

ಡಿ. ದಿ: 29-01-2007 ರಿಂದ ಮಾರ್ಚ್ 2014 ರವರೆಗಿನ ಬಾಕಿ ವೇತನ ವ್ಯತ್ಯಾಸದ ಒಟ್ಟು ಮೊತ್ತ 6,54,353/-.

ಇ. ಸದರಿ ಮೊತ್ತದ ಬಿಲ್ಲು ತಯಾರಿಸಿ ಸೇವಾ ಪುಸ್ತಕದಲ್ಲಿ ನಮೂದಿಸಲಾಗಿದೆ. ಟೋಕನ್ ನಂ. 2051292. ಆದರೆ ಖಜಾನೆಯಿಂದ ಸೆಳೆದಿರುವುದಿಲ್ಲ.

ಎಫ್. ಸದರಿ ಮೊತ್ತದಲ್ಲಿ ಸಂದಾಯವಾದ ಹಣ 1,69,299/- ಮಾತ್ರ ಟೋಕನ್ ನಂ. 00496515 ದಿ: 16-06-2015.

ಜಿ. ಬೆಳ್ಳಣ್ಣ ರವರ ಕ್ಷೇತ್ರ ಶಿಕ್ಷಣಾಧಿಕಾರಿಗಳು ವೇತನ ನಿಗದಿಗೊಳಿಸಿ ಬಾಕಿ ಪಾವತಿಸಬೇಕಾದ ವೇತನ ರೂ. 6,54,353/- ಗಳ ಪೈಕಿ 1,69,299/- ರೂಗಳನ್ನು ಮಾತ್ರ ಜಮಾ ಮಾಡಿರುತ್ತಾರೆ. ನಂತರ ವೇತನ ನಿಗದಿ ತಪ್ಪಾಗಿದೆ ಎಂದು ತಿಳಿಸಿರುತ್ತಾರೆ. ತಪ್ಪನ್ನು ಸರಿಪಡಿಸಲು ಪ್ರಯತ್ನಿಸಿರುವುದಿಲ್ಲ.

ಹಚ್. ನಂತರ ಬಂದ ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಎನ್. ಹುರುಳಿ ಇವರು ತುರ್ತು ಕ್ರಮ ಜರುಗಿಸದೇ ಖಜಾನೆಗೆ ಪತ್ರ ವ್ಯವಹಾರ ಮಾಡಿ ಕಾಲಹರಣ ಮಾಡಿರುತ್ತಾರೆ.

ಐ. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಹತ್ತಳ್ಳಿ ಇವರು ಫಿರ್ಯಾದಿದಾರರ ವೇತನ ನಿಗದಿಯನ್ನು ಪುನಃ ಪರಿಶೀಲಿಸಿ ಬಾಕಿ ವೇತನ ನೀಡಬಹುದು ಎಂದು ವರದಿಯಲ್ಲಿ ತಿಳಿಸಿರುತ್ತಾರೆ.

20) ಈ ಮೇಲ್ಕಾಣಿಸಿದ ಕಾರಣಗಳಿಗಾಗಿ ಫಿರ್ಯಾದಿದಾರರ ವೇತನವನ್ನು ಕೆ.ಸಿ.ಎಸ್.ಆರ್. ನಿಯಮ 41 ಸಿ ಅನ್ವಯ ನಿಗದಿಗೊಳಸಬೇಕಾಗಿದು, ಇರುತ್ತದೆ. ಆದರೆ ಅಂದಿನ ಎದುರುದಾರ 1 ಇವರು ವೇತನವನ್ನು ನಿಗದಿಗೊಳಿಸಿವಾಗ ತಪ್ಪನ್ನು ಎಸಗಿರುವುದು ಕಂಡುಬರುತ್ತದೆ. ಎದರುದಾರ 2 ಇವರು ತಮ್ಮ ಅವಧಿಯಲ್ಲಿ ವೇತನದಲ್ಲಿ ತಪ್ಪಾಗಿದ್ದನ್ನು ಪರಿಷ್ಕರಿಸದೇ ನಿರ್ಲಕ್ಷ್ಯ ಭಾವನೆತೋರಿ ಕಾಲಹರಣ ಮಾಡಿರುವುದು ಮತ್ತು ಫಿರ್ಯಾದಿದಾರರಿಗೆ ಅನಾವಶ್ಯಕ ಮಾನಸಿಕ ಕಿರುಕುಳ ಆಗಿರುವುದು ಕಂಡುಬರುತ್ತದೆ. ಎದುರುದಾರ 3 ಇವರು ತಮ್ಮ ಅಧಿಕಾರವನ್ನು ಪಡೆದುಕೊಂಡ ನಂತರ ವೇತನವನ್ನು ಪರೀಷ್ಕರಿಸದೇ ಅಥವಾ ಮಾಡಿರುವ ವೇತನ ಬಾಕಿಗೆ ಬಿಲ್ಲನ್ನು ಸಂದಾಯ ಮಾಡದೇ ಅಥವಾ ಪರಿಷ್ಕರಣೆಗೊಳಸಲು ಆಗದಿದ್ದ ಸಮಯದಲ್ಲಿ

ಮಹಾಲೆಕ್ಕಪಾಲಕರಿಗೆ ಸಮುಚಿತ ಮಾರ್ಗದ ಮೂಲಕ ಸಲ್ಲಿಸಬಹುದಾಗಿರುತ್ತದೆ. ಆದರೆ ಯಾವುದೇ ಕ್ರಮ ಕೈಗೊಳ್ಳದೇ ಕೇವಲ ಪತ್ರ ವ್ಯವಹಾರಕ್ಕಾಗಿ ಕಾಲಹರಣ ಮಾಡಿರುವುದು ಕಂಡುಬರುತ್ತದೆ. ದಿ: 28-02-2020 ಹಾಗೂ 27-07-2020 ರ ಶ್ರೀಮತಿ ಸಾಯಿರಾಬಾನು ಖಾನ್ ಪ್ರವಾಚಕರು ಇವರು ಸಲ್ಲಿಸಿದ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ ಸದರಿ ಫಿರ್ಯಾದಿದಾರರು 29-01-2007 ರಿಂದ 12-06-2011 ರ ಅವಧಿಯಲ್ಲಿ ವೇತನ ಸರಿಪಡಿಸಲು ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ. ದಿ: 13-06-2011 ರಂದು ಸದರಿ ಫಿರ್ಯಾದಿದಾರರು ಸರ್ಕಾರಿಶಾಲೆ ನಾಯಕವಸ್ತಿ ವಿಜಯಪುರ ಗ್ರಾಮೀಣ ವಲಯಕ್ಕೆ ಹಾಜರಾಗಿದ್ದು, ಆ ಸಮಯದಲ್ಲಿ ದಿ: 17-08-2013 ರ ಪ್ರಕಾರ ವೇತನ ನಿಗದಿಮಾಡಲಾಗಿರುತ್ತದೆ.

21) ಎದುರುದಾರ 1 ಇವರು ತಮ್ಮ ಹೇಳಿಕೆಯನ್ನು ವಿಚಾರಣಾಧಿಕಾರಿಯ ಮುಂದೆ ನೀಡಿ ಫಿರ್ಯಾದಿದಾರರಿಗೆ ವೇತನ ನಿಗದಿಮಾಡಿರುವುದೇ ತಪ್ಪಾಗಿದೆ. ಕೆ.ಸಿ.ಎಸ್.ಆರ್. ನಿಯಮ 41 ಸಿ(3) ಅನ್ವಯ ನಿಗದಿಗೊಳಿಸಬೇಕಾಗಿದ್ದು, ಆ ಸಮಯದಲ್ಲಿ ನಿಗದಿಗೊಳಿಸಿದ ವೇತನ ತಪ್ಪಾಗಿದ್ದು, ನಿಯಮ ಬಾಹಿರ ವಾಗಿದೆ. ಹಿಂದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸದರಿ ಅಂಶಗಳಿಗೆ ಜವಬ್ದಾರರಾಗಿರುತ್ತಾರೆ. ಅದರೆ ಪರೀಶೀಲಿಸಲಾಗಿ ಎದುರುದಾರ 1 ಇವರು ನಿರ್ಲಕ್ಷ್ಯ ತೋರಿರುವುದು ಮತ್ತು ಬಿಲ್ಲಿಗೆ ಸಹಿ ಮಾಡಿರುವುದು ಕಂಡುಬರುತ್ತದೆ. ಇದರಿಂದ ವೇತನ ನಿಗದಿಗೊಳಿಸುವ ಸಮಯದಲ್ಲಿ ತಪ್ಪು ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 2ನೇ ಎದರುದಾರನು ಸರಿಪಡಿಸದೇ ಕಾಲಹರಣ ಮಾಡಿದ್ದಲ್ಲದೇ ಕೇವಲ 62 ಬಿ ನಮೂನೆದಯನ್ನು ನೀಡುವಂತೆ

ಖಜಾನಾಧಿಕಾರಿಗಳಿಗೆ ಪತ್ರ ಬರೆದಿರುವುದಷ್ಟೆಯಾಗಿರುತ್ತದೆ. ಆದರೆ ಸರಿಪಡಿಸಲು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಎದರುದಾರ 3 ಇವರು ಸದರಿ ಅಂಶಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳುವ ಅಧಿಕಾರಿ ಇದ್ದರೂ ಸಹಾ ಕ್ರಮ ಜರುಗಿಸದೇ ಮತ್ತು ಸರಿಯಾಗಿ ವೇತನ ವನ್ನು ನಿಗದಿ ಪಡಿಸುವ ಕ್ರಮವನ್ನು ಕೈಗೊಳ್ಳದೆ ಹಾಗೂ ನಿಗದಿಪಡಿಸಲು ಮತ್ತು ಪರಿಷ್ಕರಿಸಲು ಆಗದೇ ಇರುವ ಸಮಯದಲ್ಲಿ ಸಮುಚಿತ ಮಾರ್ಗದ ಮುಖಾಂತರ ಮಹಾಲೆಕ್ಕಪಾಲಕರಿಗೆ ಕಳುಹಿಸಿದ್ದಲ್ಲಿ, ಪರಿಷ್ಕರಿಸುವ ಪರಿಹಾರ ಕಂಡುಕೊಳ್ಳಬಹುದಾಗಿರುತ್ತದೆ. ಆದರೆ ಹಾಗೆ ಮಾಡದೆ ಕೇವಲ ಪತ್ರ ವ್ಯವಹಾರ ಮಾಡಿರುವುದು ಕಂಡು ಬರುತ್ತದೆ.

22) ಫಿರ್ಯಾದಿದಾರನಿಗೆ ನಿಗದಿ ಪಡಿಸಿದ ವೇತನವು ಹೆಚ್ಚುವರಿಯಾಗಿರುವಲ್ಲಿ ಅಥವಾ ಕೆ.ಸಿ.ಎಸ್.ಆರ್. 41 ಸಿ (3) ಅನ್ವಯ ವೇತನ ನಿಗದಿ ಪಡಿಸಿದ್ದಲ್ಲಿ, ಆಗಬಹುದಾದ ವ್ಯತ್ಯಾಸವನ್ನು ಸರಿ ಪಡಿಸುವ ಕ್ರಮಜರುಗಿಸಬೇಕಾಗಿರುತ್ತದ. ಒಂದು ವೇಳೆ ದೂರುದಾರನು ವೇತನ ವ್ಯತ್ಯಾಸವನ್ನು ಕೋರಿರುವಂತೆ ಸಂದಾಯ ಮಾಡಿದಲ್ಲಿ ಮತ್ತು ವೇತನ ಪರಿಷ್ಕರಣೆಯ ಸಂದರ್ಭದಲ್ಲಿ ಈಗಾಗಲೇ ಪಡೆದುಕೊಂಡ ವೇತನ ಸರಿ ಎಂದು ಕಂಡುಬಂದಲ್ಲಿ ಫಿರ್ಯಾದಿದಾರನು ಹೆಚ್ಚುವರಿ ವೇತನಕ್ಕೆ ಸಂಬಂಧಪಟ್ಟಂತೆ ಕ್ರಮ ಜರುಗಿಸಿ ಫಿರ್ಯಾದಿದಾರರಿಂದ ಹಿಂಪಡೆದು ಸರ್ಕಾರಕ್ಕೆ ಭರಿಸುವ ಸಂಬಂಧ ಕ್ರಮ ಕೈಗೊಂಡ ಕುರಿತು ವರದಿಯನ್ನು ಶಿಸ್ತು ಪ್ರಾಧಿಕಾರಕ್ಕೆ ಕ.ಲೋ ಕಾಯ್ದೆ 1984 ಕಲಂ 12(1) ರ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

23) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ

ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**